ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (228) 98
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.
ಉತ್ತರ ನೀಡಬೇಕಾದ ಸಚಿವರು : (ಶ್ರೀ ಹೆಚ್. ಹಾಲಪ್ಪ)
ಮಾನ್ಯ ಸಚಿವರು ಆಹಾರ. ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಶಿರಾ ತಾಲ್ಲೂಕಿನಲ್ಲಿ ಇದುವರೆವಿಗೂ ವಿವಿಧ ಯೋಜನೆಗಳಲ್ಲಿ (ಎಪಿಎಲ್. ಬಿಪಿಎಲ್. ಅನ್ನಪೂರ್ಣ. ಅಂತ್ಯೋದಯ ಹಾಗೂ ಇತರೆ) ಯೋಜನೆಗಳಡಿ ನೀಡಿರುವ ಸಂಖ್ಯೆ ಎಷ್ಟು? (ಯೋಜನವಾರು ವಿವರ ನೀಡುವುದು)	ಶಿರಾ ತಾಲ್ಲೂಕಿನಲ್ಲಿ ವಿವಿಧ ಯೋಜನಡಿ ವಿತರಿಸಲಾದ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿದೆ. ಅಂತ್ಯೋದಯ – 6589 ಬಿಪಿಎಲ್ – 39450 ಎಪಿಎಲ್ – 20581 ಒಟ್ಟು – 66620
(ಆ)	ಈ ಕಾರ್ಡುಗಳ ಹಂಚಿಕೆಯಲ್ಲಿ ಲೋಪದೋಷವಾಗಿದ್ದು ನಿಜವಾದ ಫಲಾನುಭವಿಗಳಿಗೆ ಪಡಿತರ ಚೀಟಿ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು. ಬಂದಿದೆ.
(ಇ)	ಹಾಗಿದ್ದಲ್ಲಿ. ಅದನ್ನು ಸರಿಪಡಿಸಲು ಅನುಸರಿಸುತ್ತಿರುವ ಕ್ರಮವೇನು. (ವಿವರ ನೀಡುವುದು) ?	ಕೆಲವು ಅರ್ಹ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿಗಳು ದೊರೆತಿರುವುದಿಲ್ಲವೆಂದು ದೂರುಗಳು ಬಂದ ಹಿನ್ನೆಲೆಯಲ್ಲಿ ಶಿರಾ ತಾಲ್ಲೂಕಿನಲ್ಲಿ ಪಡಿತರ ಚೀಟಿ ಕೋರಿ ಸ್ವೀಕರಿಸಿದ 23048 ಅರ್ಜಿಗಳನ್ನು ಪರಿಶೀಲಿಸಲಾಗಿ 4848 ಅರ್ಜಿಗಳನ್ನು ಬಿಪಿಎಲ್ ಫಲಾನುಭವಿಗಳೆಂದು. 472 ಅರ್ಜಿಗಳನ್ನು ಎಪಿಎಲ್ ಫಲಾನುಭವಿಗಳೆಂದು ಗುರುತಿಸಲಾಗಿದೆ. ಉಳಿದ 17728 ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ.